ದಿ: 07.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ಆರೋಪಿ ಪರ ಶ್ರೀಯುತ ಕೆ.ಎನ್. ವಕೀಲರಿಂದ.

ನನಗೆ ರೇಖಾ ಎನ್ನುವ ಓರ್ವ ಸಹೋದರಿ ಇರುತ್ತಾರೆ ಎಂದರೆ ಸರಿ. ಪಿರ್ಯಾದಿದಾರರು ಸದರಿ ರೇಖಾರವರನ್ನು ಮದುವೆ ಆಗಿರುತ್ತಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪಿರ್ಯಾದಿದಾರರು ಕೇವಲ ನನ್ನ ಸ್ನೇಹಿತರು ಎಂದು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರ ಬಳಿ ಕೆಲಸ ಮಾಡಿಕೊಂಡಿರುತ್ತೇನೆ. ಆ ರೀತಿ ನಾನು ಪಿರ್ಯಾದಿದಾರರ ಬಳಿ ಕೆಲಸ ಮಾಡಿಕೊಂಡಿರುತ್ತೇನೆ ಎನ್ನುವ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುತ್ತೇನೆ. ಈ ಹಿಂದೆ ಪಿರ್ಯಾದಿದಾರರು ನ್ಯಾಯಾಲಯದಲ್ಲಿ ನೀಡಿರುವ ಸಾಕ್ಷಿಯ ಕುರಿತು ತಿಳಿದುಕೊಂಡಿರುತ್ತೇನೆ.

2. ಪಿರ್ಯಾದಿ ಮತ್ತು ಆರೋಪಿ ನಡುವಿನ ವ್ಯವಹಾರವನ್ನು ಖುದ್ದಾಗಿ ನೋಡಿರುವುದಿಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪಿರ್ಯಾದಿದಾರರು ಹೇಳಿರುವಂತೆ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು ಆರೋಪಿಯೊಂದಿಗೆ ಮಾಡಿದ್ದಾರೆ ಎಂದು ಹೇಳುವ ವ್ಯವಹಾರದ ಸಮಯದಲ್ಲಿ ನಾನು ಹಾಜರಿದ್ದೆ ಎನ್ನುವ ಕುರಿತು ಪಿರ್ಯಾದಿದಾರರು ಸಾಕ್ಷ್ಯ ನುಡಿದಿರುವುದಿಲ್ಲ ಮತ್ತು ನಾನು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಂತೆ ಆರೋಪಿಯು ಪಿರ್ಯಾದಿದಾರರ ಬಳಿ ಕ್ರೆಡಿಟ್ ಬೇಸಿಸ್ ಮೇಲೆ ಸರಕುಗಳನ್ನು ಖರೀದಿಸಿದ್ದರು ಎನ್ನುವ ಕುರಿತು ಕ್ರೆಡಿಟ್ ಖರೀದಿ ರಸೀದಿಯನ್ನು ನೋಡಿರುತ್ತೇನೆ. ಆರೋಪಿಯು ಪಿರ್ಯಾದಿದಾರರಿಗೆ ಚೆಕ್ಕನ್ನು ಅಂಗಡಿಯಲ್ಲಿ ನೀಡಿರುತ್ತಾರೆ. ಪಿರ್ಯಾದಿದಾರರು ಆರೋಪಿಗೆ ಸರಕನ್ನು ನೀಡಿದ್ದರು ಎಂದು ಹೇಳುವ ದಿನ ಯಾವುದೇ ಚೆಕ್ಕನ್ನು ಪಡೆದುಕೊಂಡಿರುವುದಿಲ್ಲ. ಆ ರೀತಿ ಪಿರ್ಯಾದಿದಾರರು ಆರೋಪಿಗೆ ಸರಕನ್ನು ನೀಡಿದ ಎರಡು ತಿಂಗಳ ನಂತರ ಚೆಕ್ಕನ್ನು ಪಡೆದುಕೊಳ್ಳಲಾಗಿರುತ್ತದೆ. ಆರೋಪಿಯು ಪಿರ್ಯಾದಿದಾರರಿಗೆ ಚೆಕ್ಕನ್ನು ನೀಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಮತ್ತು ಪಿರ್ಯಾದಿದಾರರು ಪೊ.ಠಾಣೆಯಲ್ಲಿ ಬಲವಂತವಾಗಿ ಆರೋಪಿ ಕಡೆಯಿಂದ ಚೆಕ್ಕನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರ ಸಂಬಂಧಿಕನಾದ ಮೇರೆಗೆ ಪಿರ್ಯಾದಿದಾರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.